ದಿ.29.08.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎನ್ .ಟಿ ವಕೀಲರಿಂದ.</u>**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಈ ದಿವಸ ನಾನು ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದೇನೆ.

1. ದಿಃ 03-03-2015 ರ ನೊಂದಾಯಿತಾ ಕ್ರಯದ ಕರಾರು ಪತ್ರವನ್ನು ಹಾಜರು ಪಡಿಸಿದ್ದು ನಿ.ಪಿ. -1 ಎಂದು ಗುರುತಿಸಲಾಯಿತು.
2. ದಿಃ 31-08-2018 ರ ಕ್ರಯ ಕರಾರಿನ ರದ್ದತಿ ಪತ್ರವನ್ನು ಹಾಜರು ಪಡಿಸಿದ್ದು ನಿ.ಪಿ-2 ಎಂದು ಗುರುತಿಸಲಾಯಿತು.
3. ದಿಃ 31-08-2018 ರ ನೊಂದಾಯಿತಾ ಕ್ರಯ ಕರಾರು ಪತ್ರವನ್ನು ಹಾಜರು ಪಡಿಸಿದ್ದು ನಿ.ಪಿ-3 ಎಂದು ಗುರುತಿಸಲಾಯಿತು.
4. ದಿಃ 30-07-2021 ನೊಂದಾಯಿತಾ ಕ್ರಯ ಕರಾರು ಪತ್ರವನ್ನು ಹಾಜರು ಪಡಿಸಿದ್ದು ನಿ.ಪಿ.-4 ಎಂದು ಗುರುತಿಸಲಾಯಿತು.
5. ದಿಃ 18-04-2023 ನೊಂದಾಯಿತಾ ಒಪ್ಪಿಗೆ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ.-5 ಎಂದು ಗುರುತಿಸಲಾಯಿತು.
6. ದಾವಾಸ್ವತ್ತಿಗೆ ಸಂಬಂಧಿಸಿದ ಎರಡು ಆರ್ಟಿಸಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಪಿ.-6 ಎಂದು ಗುರುತಿಸಲಾಯಿತು.

**<u>ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.</u>**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.26.09.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎನ್ .ಟಿ ವಕೀಲರಿಂದ.**

1. ಎಂ.ಆರ್ ಸಂಖ್ಯೆ 91/1998-99 ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ. -7 ಎಂದು ಗುರುತಿಸಲಾಯಿತು.

**ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ ಮತ್ತು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಹಾಗಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.27.06.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಎನ್.ಎಸ್ ವಕೀಲರಿಂದ.**

**1.** ಪ್ರತಿವಾದಿಗಳು ನಮ್ಮ ಊರಿನವರೇ ಎಂದರೆ ಸರಿ. ನಾನು ಇತ್ತೀಚೆಗೆ ಭದ್ರಾವತಿಯಲ್ಲಿ ವಾಸವಾಗಿರುತ್ತೇನೆ, ಹಿಂದೆ ನಾನು ಗುಡ್ಡದ ನೇರಳೆಕೆರೆಯಲ್ಲಿ ವಾಸವಾಗಿದ್ದೆ. ನಾನು ವ್ಯವಸಾಯ ಮಾಡುತ್ತಿರುತ್ತೇನೆ. ನನ್ನ ಹೆಸರಿನಲ್ಲಿ 07 ಎಕರೆ ಜಮೀನು ಇರುತ್ತದೆ. 01 ಮತ್ತು 02 ನೇ ಪ್ರತಿವಾದಿಗಳು ಅನಕ್ಷರಸ್ಥರು ಎಂದು ನನಗೆ ಗೊತ್ತಿರುವುದಿಲ್ಲ. ದಾವಾಸ್ವತ್ತು ಪ್ರತಿವಾದಿಗಳ ತಂದೆಯಿಂದ ಅವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. 02 ನೇ ಪ್ರತಿವಾದಿಗೆ ಹಲವಾರು ಕಾಯಿಲೆಗಳಿರುತ್ತವೆ ಆಗಾಗಿ ಅವರು ಚಿಕಿತ್ಸೆಗಾಗಿ ನನ್ನ ಜೊತೆಯಲ್ಲಿ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ.

**2.** 2015 ರಲ್ಲಿ ನಿಪಿ-01 ರಂತೆ ನನ್ನ ಮತ್ತು 01 ಮತ್ತು 02 ನೇ ಪ್ರತಿವಾದಿಗಳ ನಡುವೆ ಕ್ರಯದ ಕರಾರು ಪತ್ರವಾಗಿರುತ್ತದೆ ಎಂದರೆ ಸರಿ. ನಂತರ, 01 ಮತ್ತು 02 ನೇ ಪ್ರತಿವಾದಿಗಳು ಹಣ ವಾಪಸ್ಸು ಕೊಟ್ಟಿರುತ್ತಾರೆ ಆಗಾಗಿ ನಿಪಿ-02 ರಂತೆ ಕ್ರಯ ಕರಾರು ರದ್ಧತಿ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಈ ಹಿಂದೆ ಆದಂತಹ ಕರಾರು ಪತ್ರ ವನ್ನು ರದ್ದು ಮಾಡಿಸಿ ನಿಪಿ-03 ರಂತೆ ಪುನಹಃ ಕ್ರಯದ ಕರಾರು ಪತ್ರವನ್ನು ಯಾವ ಉದ್ದೇಶಕ್ಕಾಗಿ ಬರೆಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಈ ಹಿಂದೆ ಕರಾರು ಪತ್ರ ದಲ್ಲಿ ಹೇಳಿದಂತಹ ಮೊತ್ತಕ್ಕೆ

ಮಾರಾಟ ಮಾಡಲು ಆಗುವುದಿಲ್ಲ ಹೆಚ್ಚಿನ ಹಣ ಬೇಕು ಎಂದು ಹೇಳಿದ ಕಾರಣ ಹಳೆಯ ಕರಾರು ಪತ್ರದಲ್ಲಿ ಆದಂತಹ ಹಣವನ್ನು ಅವರಿಗೆ ವಾಪಸ್ಸು ಕೊಟ್ಟು ಪುನಹಃ ಮಾತುಕತೆಯಾದ ನತಂರ ನಿಪಿ-03 ರಂತೆ ರೂ.08,48,000/-ಕ್ಕೆ ಮಾರಾಟ ಮಾಡಲು ಒಪ್ಪಿ ಹೊಸದಾಗಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ಹೇಳುತ್ತಾರೆ. ಹಿಂದಿನ ಕರಾರು ಪತ್ರ ಇ.ಸಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಇ.ಸಿಯಲ್ಲಿ ಬರುತ್ತಿರುವ ಎಂಟ್ರಿಯನ್ನು ಕ್ಯಾನ್ಸೆಲ್ ಮಾಡಿಸುತ್ತೇನೆಂದು ಪ್ರತಿವಾದಿಗಳನ್ನು ಉಪನೊಂದಣಾಧಿಕಾರಿ ಕಚೇರಿಗೆ ಕರೆಸಿಕೊಂಡು ನಿಪಿ-03 ಅನ್ನು ಸೃಷ್ಟಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-03 ಕರಾರು ಪತ್ರದಲ್ಲಿ ತೋರಿಸಿರುವ ಮುಂಗಡ ಹಣ ರೂ.07,68,000/ ವನ್ನು ನಾನು 01 ಮತ್ತು 02 ನೇ ಪ್ರತಿವಾದಿ ಗೆ ಕೊಟ್ಟಿರುವುದಿಲ್ಲ ಮತ್ತು ಅವರು ನನ್ನಿಂದ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. 01 ಮತ್ತು 02 ನೇ ಪ್ರತಿವಾದಿಗಳು ಅನಕ್ಷರಸ್ಥರಾಗಿರುವುದರಿಂದ ಅವರನ್ನು ಉಪನೊಂದಣಾಧಿಕಾರಿ ಕಚೇರಿಗೆ ಕರೆದುಕೊಂಡು ಹೋಗಿ ನಿಪಿ-03 ದಾಖಲೆಯನ್ನು ಸೃಷ್ಟಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**3.** ನಿಪಿ-04 ಕ್ರಯ ಕರಾರು ಪತ್ರವನ್ನು ಪುನಹಃ ಯಾವ ಉದ್ದೇಶಕ್ಕಾಗಿ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನಿಪಿ-03 ರಂತೆ 35 ತಿಂಗಳೊಳಗೆ ಕ್ರಯ ಪತ್ರವನ್ನು ಬರೆದುಕೊಂಡುತ್ತೇನೆಂದು ಸಮಯ ತೆಗೆದುಕೊಂಡಿದ್ದರು, ಆದರೆ ಪ್ರತಿವಾದಿಗಳಿಗೆ ದಾಖಲೆ ಒದಗಿಸಿ ಕ್ರಯ ಪತ್ರ ನೊಂದಣಿ ಮಾಡಿಕೊಳ್ಳಲು ಆಗಿರುವುದಿಲ್ಲ, ನಿಪಿ-03ರ ಅವಧಿ ಮುಗಿಯುತ್ತಾ ಬಂದಿರುತ್ತದೆ ಇನ್ನೊಂದು ಪತ್ರ ಮಾಡಿಕೊಡುತ್ತೇವೆ ಇನ್ನು ಹೆಚ್ಚು ಹಣ ಬೇಕೆಂದು ಕೇಳಿರುತ್ತಾರೆ ಆಗಾಗಿ ನಿಪಿ-04 ದಾಖಲೆಯನ್ನು ಪುನಹಃ ಬರೆದುಕೊಟ್ಟಿರುತ್ತಾರೆ. ನಾನು 07ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ ನಾನು ಬಡ್ಡಿ ವ್ಯವಹಾರ ಮಾಡಿರುವುದಿಲ್ಲ. ನನ್ನದು ಆಲೆಮನೆ ಇರುತ್ತದೆ ಕಬ್ಬು ಬೆಳೆಯುವ ಕೆಲವು ರೈತರು ಬಿತ್ತನೆ ಮಾಡಲು ಮತ್ತು ರಸಗೊಬ್ಬರಕ್ಕಾಗಿ ನನ್ನಿಂದ ಕೈಗಡ ಸಾಲ ತೆಗೆದುಕೊಂಡು ಹೋಗುತ್ತಿದ್ದರು, ಕಬ್ಬನ್ನು ನನ್ನ ಆಲೆಮನೆಗೆ ಹಾಕಿದ ನತಂರ ನಾನು ನನ್ನ ಸಾಲವನ್ನು ಮುರಿದುಕೊಂಡು ಉಳಿದ ಹಣವನ್ನು ಕೊಡುತ್ತಿದ್ದೆ. ನಾನು ಬಡ್ಡಿಗೆ ಹಣವನ್ನು ಕೊಡುತ್ತಿರಲಿಲ್ಲ. ನಿಪಿ-03 ದಾಖಲೆಯಾದ ನಂತರ, ಇ.ಸಿ ಕ್ಯಾನ್ಸಲ್ ಆಗಿತ್ತೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

**4.** ನಿಪಿ-03ರ ಕ್ರಯ ಕರಾರು ಪತ್ರದ ಅವಧಿ ಮುಗಿಯುತ್ತಿರುತ್ತದೆ ನೀವು ಕ್ರಯ ಪತ್ರವನ್ನು ಬರೆದುಕೊಡಿ ಎಂದು ನಾನು ವಕೀಲರ ಮೂಲಕ ನೋಟಿಸ್ ಅನ್ನು ಕೊಟ್ಟಿರುವುದಿಲ್ಲ, ಆದರೆ ಬಾಯಿ ಮಾತಿನಲ್ಲಿ ಮಾತನಾಡಿರುತ್ತೇವೆ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಪಿ-03 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-04 ಕರಾರು ಪತ್ರದಲ್ಲಿ ಹೇಳಿದಂತೆ ನಾನು ಪ್ರತಿವಾದಿಗಳಿಗೆ ಹಣವನ್ನು ಕೊಟ್ಟಿರುವುದಿಲ್ಲ ಮತ್ತು ನಾನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**5.** ನಾನು ಇ.ಸಿ ಕ್ಯಾನ್ಸಲ್ ಮಾಡಿಸುತ್ತೇನೆಂದು ಹೇಳಿ ನಿಪಿ-04 ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ-04 ಕ್ರಯ ಕರಾರು ಪತ್ರಕ್ಕೆ 03ನೇ ಪ್ರತಿವಾದಿ

ಚೇತನ್ ಕುಮಾರ್ ಸಹಿ ಮಾಡಿರುವುದಿಲ್ಲ ಆಗಾಗಿ ನಿಪಿ–05 ಒಪ್ಪಂದ ಕ್ರಯ ಕರಾರು ಪತ್ರವನ್ನು ದಿಃ 18–04–2023 ರಂದು ಬರೆದುಕೊಟ್ಟಿರುತ್ತಾರೆ. ನಿಪಿ–04 ಮತ್ತು 05 ರಲ್ಲಿ ಹೇಳಿದ ಹಾಗೆ ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ